ಓ. ಎಸ್. ನಂಬರ:-45/2024

ಪಿ.ಡಬ್ಲೂ-:-5 : ಆನಂದ ತಂದೆ ನಂಜೆಗೌಡ

ದಿನಾಂಕ:-27-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲು : ಶ್ರೀ ಪಿ ಬಿ ಪಿ ವಕೀಲರಿಂದ.

ನನ್ನ ಊರು ಬೆಂಗಳೂರು ಆಗಿರುತ್ತದೆ. ಅಫಜಲಪೂರ ತಾಲೂಕಿನ ಕೂಡಿಗನೂರ ಗ್ರಾಮಕ್ಕೆ ೩-೪ ಬಾರಿ ನಾನು ಬಂದು ಹೋಗಿರುತ್ತೇನೆ. ನನಗೆ ಕೂಡಿಗನೂರ ಗ್ರಾಮದಲ್ಲಿ ಬಹಳಷ್ಟು ಜನ ಪರಿಚಯ ಇರುತ್ತಾರೆ ಎಂದರೆ ಸರಿ. ನಾನು ಐ ಟಿ ನೌಕರನಾಗಿರುತ್ತೇನೆ. ಪ್ರತಿವಾದಿ ಶಾವರಸಿದ್ದರವರು ಈಗ ಏನು ಕೆಲಸ ಮಾಡುತ್ತಿದ್ದಾನೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯು ಮೊದಲು ಹೆಚ್ ಆರ್ ಆಗಿ ಕೆಲಸ ಮಾಡುತ್ತಿದ್ದರು ಎನ್ನುತ್ತಾರೆ. ನನಗೆ ನೇರವಾಗಿ ಪ್ರತಿವಾದಿ ಶಾವರಸಿದ್ದರವರು ಪರಿಚಯ ಇಲ್ಲ, ಅವರು ವಾದಿಯ ಮೂಲಕ ನನಗೆ ಪರಿಚಯ ಎಂದರೆ ಸರಿ.

೨. ವಾದಿ ಮತ್ತು ಪ್ರತಿವಾದಿಯ ನಡುವೆ ಆದ ವ್ಯವಹಾರ ನನಗೆ ವಾದಿ ಹೇಳಿದ್ದರಿಂದ ಗೊತ್ತು ಎಂದರೆ ಸರಿ. ಸಾಕ್ಷಿಯು ಪ್ರತಿವಾದಿ ಕೂಡಾ ವಾದಿಯಿಂದ ಹಣ ಪಡೆದ ಬಗ್ಗೆ ನನಗೆ ಸಿಕ್ಕಾಗ ಹೇಳಿದ್ದರು ಎನ್ನುತ್ತಾರೆ. ಪ್ರತಿವಾದಿ ಬೆಂಗಳೂರಿನಲ್ಲಿ ಇದ್ದಾಗ ವಾದಿಯಿಂದ ಕೈಗಡ ಹಣ ಪಡೆಯುತ್ತಿದ್ದರು ಎಂದರೆ ಸರಿ. ಪ್ರತಿವಾದಿ ತಾವು ಪಡೆದ ಹಣವನ್ನು ವಾದಿಗೆ ಮರಳಿ ಕೂಡಾ ನೀಡುತ್ತಿದ್ದರು ಎಂದರೆ ಸರಿ. ದಾವಾ ಜಮೀನಿನ ಸರ್ವೆ ನಂಬರ ೪೬/೫ ಇರುತ್ತದೆ. ದಾವಾ

ಜಮೀನು ನಾನು ದೂರದಿಂದ ನೋಡಿರುತ್ತೇನೆ. ದಾವಾ ಜಮೀನು ಪ್ರತಿವಾದಿಗೆ ಹೇಗೆ ಬಂದಿದೆ ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿಗೆ ಜಮೀನು ಹೇಗೆ ಬಂದಿದೆ ಎಂದು ಊರಿನಲ್ಲಿ ನಾವು ವಿಚಾರ ಮಾಡಿರುವುದಿಲ್ಲ. ಈ ದಿನ ನ್ಯಾಯಾಲಯಕ್ಕೆ ನಾನು ಮತ್ತು ವಾದಿ ಸೇರಿ ಬಂದಿರುತ್ತೇವೆ ಎಂದರೆ ಸರಿ. ವಾದಿಯೆ ನನ್ನನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿ. ಸಾಕ್ಷಿಯು ನಾನು ಮತ್ತು ವಾದಿ ಗೆಳೆಯರಾಗಿದ್ದರಿಂದ ನಾನು ಬಂದಿರುತ್ತೇನೆ ಎನ್ನುತ್ತಾರೆ. ದಾವಾ ಆಸ್ತಿಯ ಕುರಿತು ಪ್ರತಿವಾದಿಯ ಅಕ್ಕ-ತಂಗಿಯರ ಜೊತೆಗೆ ನಾವು ಮಾತು-ಕಥೆ ಮಾಡಿರುವುದಿಲ್ಲ.

೩. ಪ್ರತಿವಾದಿಗೆ ಮಮತಾ ಎಂದು ಒಬ್ಬ ಸಹೋದರಿ ಇದ್ದು, ಅವರೂ ಕೂಡಾ ಐ ಟಿ ಕಂಪನಿಯಲ್ಲಿ ನೌಕರಿ ಮಾಡುತ್ತಾರೆ ಎಂದರೆ ಸಾಕ್ಷಿಯು ಅವರ ಹೆಸರು ಕೇಳಿರುತ್ತೇನೆ ಆದರೆ ಅವರನ್ನು ನೋಡಿರುವುದಿಲ್ಲ ಎನ್ನುತ್ತಾರೆ. ಸದರಿ ಮಮತಾರವರು ವಾದಿಗೆ ಪರಿಚಯ ಇರುತ್ತಾರೆ ಎಂದರೆ ಸಾಕ್ಷಿಯು ಇರಬಹುದು ಅದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಪ್ರತಿವಾದಿ ಶಾವರಸಿದ್ದರವರು ಅವರ ಸಹೋದರಿಯಾದ ಮಮತಾರವರ ಮನೆಯಲ್ಲಿಯೆ ಬೆಂಗಳೂರಿನಲ್ಲಿ ವಾಸ ಇರುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ವಾದಿ ನನ್ನ ಗೆಳೆಯನಾಗಿದ್ದರಿಂದ ಅವರಿಗೆ ಸಹಾಯ ಮಾಡಲು ನಿಪಿ-೧ ನ್ನು ಸೃಷ್ಠಿಸಿಕೊಂಡು ನಾನು ಅದಕ್ಕೆ ಸಹಾಯವಾಗಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಪ್ರತಿವಾದಿಗೆ ಯಾವುದೆ ಹಣ ನಿಡದೆ ಇದ್ದರೂ ಸಹ ನಾವು ಒಂದು ದಾಖಲೆಯನ್ನು ಸೃಷ್ಠಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

೪. ವಾದಿಗೆ ಸುಮಾರು ತಿಂಗಳಿಗೆ ೪೦ ಸಾವಿರ ರೂಪಾಯಿ ಸಂಬಂಳ ಇರಬಹುದು. ಬೆಂಗಳೂರಿನಲ್ಲಿ ರೂ.೪೦,೦೦೦/- ಸಂಬಂಳದಲ್ಲಿ ಕುಟುಂಬದ ನಿರ್ವಹಣೆ ಮಾಡಲು ಕಷ್ಟ

ಆಗುತ್ತದೆ ಎಂದರೆ ಸರಿ. ರೂ.೪೦,೦೦೦/- ಸಂಬಂಳದ ವ್ಯಕ್ತಿ ೩೦-೪೦ ಲಕ್ಷ ರೂಪಾಯಿ ವ್ಯವಹಾರ ಮಾಡಲು ಕಷ್ಟ ಆಗುತ್ತದೆ ಎಂದರೆ ಸಾಕ್ಷಿಯು ವಾದಿಗೆ ಊರಲ್ಲಿ ಜಮೀನು ಇರುತ್ತದೆ ಎನ್ನುತ್ತಾರೆ. ವಾದಿ ದೇವರಾಜ ಚಿಕ್ಕಮಗಳೂರಿನವರು ಆಗಿರುತ್ತಾರೆ. ಅವರ ನಿಖರವಾದ ಊರು ಹೇಳಲು ನನಗೆ ಈಗ ನೆನಪಾಗುತ್ತಿಲ್ಲ. ವಾದಿಗೆ ಸುಮಾರು ೩ ರಿಂದ ೪ ಎಕರೆ ಜಮೀನು ಇರುತ್ತದೆ. ನಾನು ವಾದಿಯ ಊರಿಗೆ ಒಂದು ಬಾರಿ ಹೋಗಿದ್ದೆ ಆದರೆ ಅವರ ಜಮೀನನ್ನು ನಾನು ನೋಡಿರುವುದಿಲ್ಲ. ಚಿಕ್ಕಮಗಳೂರ ಭಾಗದಲ್ಲಿ ಜಮೀನು ಗುಡ್ಡುಗಾಡು ಇರುವುದರಿಂದ ಚೆನ್ನಾಗಿ ಇರುವುದಿಲ್ಲ ಎಂದರೆ ಸರಿಯಲ್ಲ. ವಾದಿಗೆ ಪ್ರತಿವಾದಿಯ ಜೊತೆಗೆ ನಾನು ಹೇಳಿದಂತೆ ವ್ಯವಹಾರ ಮಾಡುವ ಸಾಮಾರ್ಥ್ಯ ಇರದೆ ಇದ್ದರೂ ನಾವೆಲ್ಲ ನಿಪಿ-೧ ನ್ನು ಸೃಷ್ಠಿಸಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,

ಅಫಜಲಪೂರ.